**ಸಾಕ್ಷಿಯನ್ನು ದಿಃ 23.07.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಗಜಮುಖ್ ಸೆಕ್ಯೂರಿಟಿ ರವರ ಪೇ ಸ್ಲಿಪ್ ನ್ನು ಹಾಜರುಪಡಿಸಿದ್ದು, ನಿಪಿ. 18 ಎಂದು, ಐ.ಡಿ ಕಾರ್ಡ್ ನ್ನು ಹಾಜರುಪಡಿಸಿದ್ದು, ನಿಪಿ. 19 ಎಂದು,ಗುರುತಿಸಲಾಯಿತು. ಆದುದರಿಂದ ನಾನು ಕೋರಿರುವಂತೆ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

(ನಿಪಿ. 19 ರ ಮೂಲ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿಗೆ ಹಿಂದಿರುಗಿಸಲಾಯಿತು)

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

1. ನನ್ನ ಅರ್ಜಿಯಲ್ಲಿ 30,000/- ವರಮಾನ ಇತ್ತು ಎಂದು ಹೇಳಿದ್ದೇನೆ ಎಂದರೆ ಸರಿ. ಅಪಘಾತವಾದ ಕಾಲದಲ್ಲಿ 30,000/- ವರಮಾನ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂರೆ ಸಾಕ್ಷಿಯು ನಾನು ವ್ಯವಸಾಯ ಮತ್ತು ಹೈನುಗಾರಿಕೆ ಸಹ ಮಾಡುವ ಕಾರಣ ಒಟ್ಟಾಗಿ 30,000/- ದುಡಿಯುತ್ತೇನೆ. ವ್ಯವಸಾಯ ಮತ್ತು ಹೈನುಗಾರಿಕೆ ಮಾಡಲುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ತಂದೆಯ ಹೆಸರಿನಲ್ಲಿರುವ ಆರ್ ಟಿ ಸಿ ಹಾಜರುಪಡಿಸಿದ್ದೇನ ಎನ್ನುತ್ತಾರೆ. ಯಾವುದೇ ವ್ಯವಸಾಯ ಹೈನುಗಾರಿಕೆ ಮಾಡದಿದ್ದರು ಸಹ ಸುಳ್ಳು ಸಾಕ್ಷಿ ಹೇಳುತಿತದ್ದೇನೆ ಎಂದರೆ ಸರಿಯಲ್ಲ.

2. ನಾನು ಹಾಜರುಪಡಿಸಿದ ಗುರುತಿನ ಚೀಟಿ ಈ ದಿನ ಕೊಟ್ಟಿರುವ ಗುರುತಿನ ಚೀಟಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹಳೆಯ ಗುರುತಿನ ಚೀಟಿ ಕಳೆದು ಹೋಗಿರುವ ಕಾರಣ ಈ ದಿನ ನೀಡಿದ್ದಾರೆ ಎನ್ನುತ್ತಾರೆ. ನನ್ನಲ್ಲಿ ಹಳೆಯ ಗುರುತಿನ ಚೀಟಿ ಇಲ್ಲದೆ ಇದ್ದರೂ ಸಹ ನಾನು ಸೆಕ್ಯೂರಿಟಿ ಆಗಿ ಕೆಲಸ ಮಾಡದೆ ಇದ್ದರೂ ಸಹ ನಿಪಿ 18 ಮುತ್ತು 19 ನ್ನು ಸುಳ್ಳಾರಿ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.